ಸಿ.ಸಿ ನಂಃ 395/2022

ಪಿ ಡಬ್ಲುಃ 01.

ಸಾಕ್ಷಿಯನ್ನು ದಿನಾಂಕಃ **06.03.2026.** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಬಿ.ಎನ್.ಎಂ., ಆರೋಪಿ ಪರ ವಕೀಲರಿಂದಃ**

ನಾನು ದ್ವಿತಿಯ ಪಿ.ಯು.ಸಿವರೆಗೂ ವಿದ್ಯಾಭ್ಯಾಸವನ್ನು ಮಾಡಿದ್ದು, ನನಗೆ ಓದಲು ಬರೆಯಲು ಬರುತ್ತದೆ. ನಾನು ಈಗ ಹಾವೇರಿಯಲ್ಲಿರುವ ಸಮೃದ್ಧಿ ಕೋ-ಆಪರೇಟಿವ ಬ್ಯಾಂಕಿನಲ್ಲಿ ಫೀಲ್ಡ ವರ್ಕರ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ. ನಾನು ಹಾವೇರಿ ಶಾಖೆಯಲ್ಲಿ ಸುಮಾರು 6 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ಶಿರಸಿ ಶಾಖೆಯಲ್ಲಿ 2006 ರಿಂದ 2014 ರವರೆಗೆ ಕೆಲಸ ಮಾಡಿದ್ದೇನೆ. ಸಮೃದ್ಧಿ ಕೋ-ಆಪರೇಟಿವ ಬ್ಯಾಂಕ್ ಹೊರತುಪಡಿಸಿ, ಬಿ.ಎಸ್.ಎಲ್ ಕಂಪನಿಯಲ್ಲಿ ಕೆಲಸ ಮಾಡಿದ್ದೇನೆ. ನಾನು ಸದರಿ ಕಂಪನೀಯ ಹುಬ್ಬಳ್ಳಿ ಕಚೇರಿಯಲ್ಲಿ 2008 ರಿಂದ 2013 ರವರೆಗೆ ಕೆಲಸ ಮಾಡಿದ್ದೇನೆ. ಈ ಮೂರು ಕಡೆ ಹೊರತುಪಡಿಸಿ, ನಾನು ಬೇರೆ ಎಲ್ಲಿಯೂ ಸಹ ಕೆಲಸ ಮಾಡಿರುವುದಿಲ್ಲ. ಹಾನಗಲ್ ತಾಲೂಕಿನ ಮಕರವಳ್ಳಿ ಗ್ರಾಮದಲ್ಲಿ ಹೆಚ್.ಡಿ.ಎಫ್.ಸಿ ಬ್ಯಾಂಕ್ ಇದೆ ಎಂದರೆ ಸರಿ. ಸದರಿ ಬ್ಯಾಂಕಿನಲ್ಲಿ ನಾನು ಕೆಲಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಿಂಗಳ ಆದಾಯ ಕಮೀಷನ್ ಮೇಲೆ ಅವಲಂಬಿತವಾಗಿರುತ್ತದೆ, ನನಗೆ ತಿಂಗಳಿಗೆ ಸುಮಾರು 25-26 ಸಾವಿರ ಕಮೀಷನ್ ಬರುತ್ತದೆ.

ನಾನು ಮುಂಡಗೋಡಿನ ಕೆನರಾ ಮತ್ತು ಎಸ್.ಬಿ.ಐ ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿದ್ದೇನೆ. ಇವುಗಳನ್ನು ಹೊರತುಪಡಿಸಿ, ನಾನು ಹುಬ್ಬಳ್ಳಿಯ ಇಕೋಟಸ್ ಬ್ಯಾಂಕನಲ್ಲಿ ಖಾತೆಯನ್ನು ಹೊಂದ್ದಿದೇನೆ. ಅದೇ ರೀತಿ ನಾನು ಅಕ್ಷಯ ಕೋ-ಆಪರೇಟಿವ ಸೊಸೈಟಿ ಮತ್ತು ಬಸವೇಶ್ವರ ಕೋ-ಆಪರೇಟಿವ ಸೊಸೈಟಿ ಖಾತೆಯನ್ನು ಹೊಂದ್ದಿದೇನೆ. ನನ್ನ ಸಂಬಳ ಖಾತೆಗೆ ಜಮೆ ಆಗುವುದಿಲ್ಲ. ನನ್ನ ಸಂಬಳ ನಗದು ರೂಪದಲ್ಲಿ ಕೊಡುತ್ತಾರೆ. ಸಂಸ್ಥೆಯವರು ಅವರ ಸಿಬ್ಬಂದಿಗಳಿಗೆ ಸಂಬಳ ಕೊಡುವ ಬಗ್ಗೆ ರಿಜಿಸ್ಟರ್ ಮೆಂಟೇನ್ ಮಾಡುತ್ತಾರೆ ಎಂದರೆ ಸರಿ. ನನಗೆ 25-26 ಸಾವಿರ ರೂಪಾಯಿ ಸಂಬಳ ಬರುತ್ತೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದು ಇರುವುದಿಲ್ಲ, ಸದರಿ ದಾಖಲಾತಿಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಮ್ಮ ಕುಟುಂಬದಲ್ಲಿ 5 ಜನ ಮತ್ತು 4 ಜನ ಮಕ್ಕಳಿದ್ದಾರೆ, ನಮ್ಮದು ಒಟ್ಟು ಕುಟುಂಬ ಎಂದರೆ ಸರಿ. ನಮ್ಮ ತಂದೆ ಮತ್ತು ನಾನು ಒಟ್ಟು ಕುಟುಂಬದ ಮ್ಯಾನೇಜರ ಆಗಿರುತ್ತೇವೆ. ನನಗೆ ಇಬ್ಬರು ಮಕ್ಕಳು. ನಮಗೆ ಸಂಬಂಧಿಸಿದ ಕೃಷಿ ಭೂಮಿ ಇದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಜಮೀನಿನ ಬಗ್ಗೆ ನಮೂದು ಮಾಡಿದ್ದು ಇರುವುದಿಲ್ಲ. ದೂರು ಮತ್ತು ನೋಟಿಸ್ಸನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ದೂರು ಮತ್ತು ನೋಟಿಸ್ಸನ್ನು ಓದಿ ತಿಳಿದುಕೊಂಡಿರುತ್ತೇನೆ. ನಾನು ವಾಹನಗಳ ಇನ್ನೂರೆನ್ಸ ಸಹ ಮಾಡಿಸಿದ್ದೇನೆ.

ನಾನು ನನ್ನ ಪ್ರಮಾಣ ಪತ್ರದಲ್ಲಿ ನನ್ನ ಉದ್ಯೋಗ ವ್ಯಾಪಾರವೆಂದು ತೋರಿಸಿರುತೇನೆ ಎಂದರೆ, ನಾನು ವ್ಯಾಪಾರ ಮಾಡುವುದಿಲ್ಲ. ನಮ್ಮ ಕುಟುಂಬದ ಜಮೀನುಗಳು ಸಾಲಗಾಂವ ಗ್ರಾಮದಲ್ಲಿ ನನ್ನ ಹೆಸರಿಗೆ , ನನ್ನ ತಂದೆಯ ಹೆಸರಿಗೆ ಮತ್ತು ನನ್ನ ತಮ್ಮನ ಹೆಸರಿಗೆ ಇರುತ್ತದೆ. ಅವುಗಳ ಸರ್ವೇ ನಂಬರ್ ಮತ್ತು ಕ್ಷೇತ್ರ 113/12 ಆಗಿದ್ದು , ಅದರ ಕ್ಷೇತ್ರ 1 ಎಕರೆ, ಸರ್ವೇ ನಂಬರ್ 113/1 ಕ್ಷೇತ್ರ 1 ಎಕರೆ ಮತ್ತು ಸರ್ವೇ ನಂಬರ್ 113/7 ಕ್ಷೇತ್ರ 1 ಎಕರೆ ಇರುತ್ತದೆ. ನಮ್ಮ ಕುಟುಂಬಕ್ಕೆ ಬಿ.ಪಿ.ಎಲ್ ಕಾರ್ಡ ನೀಡಲಾಗಿದೆ. ನಮ್ಮ ಕುಟುಂಬದ ಬಿ.ಪಿ.ಎಲ್ ಕಾರ್ಡನಲ್ಲಿ ನನ್ನ , ನನ್ನ ಹೆಂಡತಿ ಮತ್ತು ನನ್ನ ಮಕ್ಕಳ ಹೆಸರು ಇದೆ . ನನ್ನ ತಮ್ಮನ ಕುಟುಂಬಕ್ಕೆ ಸಂಬಂಧಿಸಿದ ಪ್ರತ್ಯೇಕ ಬಿ.ಪಿ.ಎಲ್ ಕಾರ್ಡ ಇದೆ. ಸರ್ಕಾರದವರು ಕುಟುಂಬದ ಆದಾಯ ವರ್ಷಕ್ಕೆ 1,20,000/- ಕ್ಕಿಂತ ಕೆಳಗೆ ಇದ್ದಲ್ಲಿ ಮಾತ್ರ ಬಿ.ಪಿ.ಎಲ್ ಕಾರ್ಡ ಕೊಡುವುದಿಲ್ಲ ಎಂದರೆ ಸರಿ. ನನಗೆ ಸಾಲ ಕೊಡುವಷ್ಟು ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನಮ್ಮ ಒಟ್ಟು

ಕುಟುಂಬದ ಖರ್ಚು ತಿಂಗಳಿಗೆ 15,000/- ಬರುತ್ತದೆ. ನಾವು ಪ್ರತಿ ವರ್ಷ ಜಮೀನಿನಲ್ಲಿ ಶುಂಠಿ ಬೆಳೆಯುತ್ತೇವೆ . 2021 ನೇ ಇಸ್ವಿಯಲ್ಲಿ 2 ಎಕರೆ ಜಮೀನಿನಲ್ಲಿ ಶುಂಠಿಯನ್ನು ಬೆಳೆದಿದ್ದೇವು. ರೈತರು ಬೆಳೆದ ಬೆಳೆಗಳ ಬಗ್ಗೆ ಸರ್ಕಾರದವರು ಸರ್ವೇ ಮಾಡುತ್ತಾರೆ ಎಂದರೆ ಸರಿ. ನಾವು 2021 ರಲ್ಲಿ ಯಾವ ಬೆಳೆ ಬೆದಿದ್ದೆವೆಂದು 2022 ರ ಪಹಣಿ ಪತ್ರಿಕೆಯಲ್ಲಿ ನಮೂದಾಗುತ್ತದೆ ಎಂದರೆ ಸರಿ. 2022 ರ ಜಮೀನಿನ ಪಹಣಿ ಪತ್ರಿಕೆಯಲ್ಲಿ ಭತ್ತ ಎಂದು ನಮೂದಾಗಿದೆ ಎಂದರೆ ಹೌದು.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

**Sd/-**

**ಪ್ರ ದ ನ್ಯಾದಂ ಮುಂಡಗೋಡ.**